

# بِسۡمِ اللّٰہِ الرَّحۡمٰنِ الرَّحِیۡمِ

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ 17-07-2020 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್, ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಕಳೆದ ವಾರದ ಖುತ್‌ಬದಲ್ಲಿ ಹಝ್ರತ್ ಸಅದ್ ಬಿನ್ ಮುಆದ್(ರ)ರ ಬಗ್ಗೆ ಪ್ರಸ್ತಾಪಿಸುತ್ತಾ ಇದ್ದೆ. ಖಂದಕ್ ಯುದ್ಧದಲ್ಲಿ ಅವರಿಗೆ ಎಂತಹ ಮಾರಕ ಗಾಯವಾಯಿತೆಂದರೆ ಅವರಿಗೆ ಕೊನೆಯವರೆಗೂ ಆ ಗಾಯದಿಂದ ಮುಕ್ತಿ ಪಡೆಯಲು ಸಾಧ್ಯವಾಗಲಿಲ್ಲ. ಗಾಯಗೊಂಡ ಅವರಿಗೋಸ್ಕರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮಸ್‌ಜಿದ್‌ನಲ್ಲಿ ಒಂದು ಡೇರೆ ರಚಿಸಿದ್ದರು. ಅವರನ್ನು ಸಮೀಪದಲ್ಲಿರಿಸಿ ಸಂದರ್ಶಿಸಿ ಶುಶ್ರೂಷಿಸಲು ಹಾಗೆ ಮಾಡಿದ್ದರು. ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಹಝ್ರತ್ ಸಅದರ ಗಾಯ ಒಣಗುತ್ತಾ ಇರುವಾಗ ಅವರು ಹೀಗೆ ಪ್ರಾರ್ಥಿಸಿದರು: ಓ ಅಲ್ಲಾಹ್, ನಿನ್ನ ಸಂದೇಶವಾಹಕರನ್ನು ಸುಳ್ಳುವಾದಿ ಎಂದು ಹೇಳಿ ಅವರನ್ನು ಮಕ್ಕದಿಂದ ಹೊರಗೆ ಹೋಗುವಂತೆ ಮಾಡಿದ ಜನರ ವಿರುದ್ಧ ಜಿಹಾದ್ ಮಾಡುವುದಕ್ಕಿಂತ ಬೇರೆ ಯಾವುದೂ ನನಗೆ ಪ್ರಿಯಕರವಾಗಿಲ್ಲ ಎಂದು ನಿನಗೆ ತಿಳಿದಿದೆ. ನಮ್ಮ ಮತ್ತು ಅವರ ಮಧ್ಯೆ ಯುದ್ಧಗಳನ್ನು ನೀನು ಕೊನೆಗೊಳಿಸಿರುವೆ ಎಂದು ನಾನು ಯೋಚಿಸುತ್ತಿದ್ದೇನೆ. ಖುರೈಶಿಗಳ ವಿರುದ್ಧ ಹೋರಾಡುವ ಯುದ್ಧಗಳು ಇನ್ನೂ ಬಾಕಿ ಉಳಿದಿದ್ದರೆ ಅವರನ್ನು ಎದುರಿಸಲು ನನ್ನನ್ನು ಜೀವಂತವಾಗಿರಿಸು. ನಾನು ಅವರ ವಿರುದ್ಧ ಜಿಹಾದ್ ಮಾಡಲು ನನಗೆ ಸಾಧ್ಯವಾಗುವಂತೆ ಮಾಡು. ಅಥವಾ ನಾನು ಯೋಚಿಸುವ ಹಾಗೆ ನೀನು ನಮ್ಮ ಮತ್ತು ಅವರ ಮಧ್ಯೆ ಯುದ್ಧಗಳನ್ನು ಕೊನೆಗೊಳಿಸಿದ್ದರೆ ನನ್ನ ರಕ್ತನಾಳವನ್ನು ತೆರೆದು ಈ ಗಾಯ ನನ್ನ ಶಹಾದತ್‌ಗೆ ಕಾರಣವಾಗುವಂತೆ ಮಾಡು.

ಹಝ್ರತ್ ಆಯಿಶ(ರ) ವರದಿ ಮಾಡುತ್ತಾರೆ: ಅದೇ ರಾತ್ರಿ ಗಾಯದ ರಕ್ತನಾಳದಿಂದ ರಕ್ತ ಹರಿಯಲು ತೊಡಗಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಆ ವಿಷಯ ತಿಳಿದಾಗ ಅವರು ಹಝ್ರತ್ ಸಅದರ ಬಳಿಗೆ ಹೋಗಿ ಅವರ ತಲೆಯನ್ನು ತನ್ನ ತೊಡೆಯ ಮೇಲೆ ಇರಿಸಿದರು ಮತ್ತು ಅವರಿಗೆ ಬಿಳಿ ಚಾದರವನ್ನು ಹೊದಿಸಿದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪ್ರಾರ್ಥಿಸಿದರು: ಓ ಅಲ್ಲಾಹ್, ಸಅದ್ ನಿನ್ನ ಮಾರ್ಗದಲ್ಲಿ ಜಿಹಾದ್ ಮಾಡಿದರು. ನಿನ್ನ ರಸೂಲನನ್ನು ಅಂಗೀಕರಿಸಿದರು. ಅವರು ತಮ್ಮ ಹೊಣೆಗಾರಿಕೆಗಳನ್ನು ಈಡೇರಿಸಿರುವರು. ನೀನು ಆತ್ಮಗಳನ್ನು ಉತ್ತಮವಾಗಿ ಸ್ವೀಕರಿಸುವ ಹಾಗೆಯೇ ಸಅದರ ಆತ್ಮವನ್ನೂ ಉತ್ತಮವಾಗಿ ಸ್ವೀಕರಿಸು. ಹಝ್ರತ್ ಸಅದ್‌ರಿಗೆ ಆಗ ಸ್ವಲ್ಪ ಪ್ರಜ್ಞೆ ಇತ್ತು. ಅವರು ಕಣ್ಣು ತೆರೆದು ಹೇಳಿದರು: ಯಾ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಅಸ್ಸಲಾಮು ಅಲೈಕುಮ್ ತಾವು ಅಲ್ಲಾಹನ ಸಂದೇಶವಾಹಕರೆಂದು ನಾನು ಸಾಕ್ಷಿ ಹೇಳುತ್ತೇನೆ.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಬರೆಯುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಹಝ್ರತ್ ಸಅದರು ನಿಧನ ಹೊಂದಿದಾಗ ತೀವ್ರ ದುಃಖವಾಯಿತು. ಅಂದಿನ ಪರಿಸ್ಥಿತಿಯಲ್ಲಿ ಹಝ್ರತ್ ಸಅದರ ಅಗಲಿ ಹೋಗುವಿಕೆ ಮುಸ್ಲಿಮರಿಗೆ ಪರಿಹರಿಸಲಾಗದ ನಷ್ಟವಾಗಿತ್ತು. ಮುಹಾಜಿರೀನ್‌ಗಳಲ್ಲಿ ಹಝ್ರತ್ ಅಬೂಬಕರ್‌ರಿಗೆ(ರ) ಇದ್ದ ಸ್ಥಾನವೇ ಹಝ್ರತ್ ಸಅದರಿಗೆ ಅನ್‌ಸಾರ್‌ಗಳಲ್ಲಿ ಇತ್ತು. ನಿಷ್ಠೆಯಲ್ಲಿ, ಬಲಿದಾನ ನೀಡುವುದರಲ್ಲಿ, ಇಸ್ಲಾಮಿಗೆ ಸೇವೆ ಮಾಡುವುದರಲ್ಲಿ, ಸಂದೇಶವಾಹಕರನ್ನು ಪ್ರೀತಿಸುವುದರಲ್ಲಿ ಹಝ್ರತ್ ಸಅದ್ ಎಂತಹ ಉಚ್ಛತಮ ಸ್ಥಾನ ಗಳಿಸಿದ್ದರೆಂದರೆ ಅಂತಹ ಸ್ಥಾನ ಬಹಳ ಕಡಿಮೆ ಸಂಖ್ಯೆಯ ಜನರಿಗೆ ದೊರಕುತ್ತದೆ. ಅವರ ಪ್ರತಿಯೊಂದು ಚಲನವಲನಗಳಿಂದ, ಇಸ್ಲಾಂ ಮತ್ತು ಇಸ್ಲಾಮಿನ ಸ್ಥಾಪಕರ ಬಗ್ಗೆ ಪ್ರೀತಿ ಅವರ ಆತ್ಮದ ಆಹಾರವಾಗಿತ್ತೆಂದು ಸಾಬೀತಾಗುತ್ತಿತ್ತು. ಅವರು ತಮ್ಮ ಗೋತ್ರದ ಮುಖಂಡರಾಗಿದ್ದ ಕಾರಣದಿಂದ ಅವರ ಮಾದರಿ ಕರ್ಮಗಳು ಅನ್‌ಸಾರ್‌ಗಳ ಕರ್ಮಗಳಲ್ಲಿ ಗಾಢವಾದ ಪ್ರಭಾವ ಬೀರುತ್ತಿತ್ತು. ಆದುದರಿಂದ ಇಂತಹ ಸಾಮರ್ಥ್ಯಶಾಲಿ, ಆಧ್ಯಾತ್ಮಿಕ ಪುತ್ರನ ಮೃತ್ಯು ಸಂಭವಿಸಿದಾಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಅನುಭವಿಸಿದ ತೀವ್ರ ದುಃಖ ಪ್ರಕೃತಿ ಸಹಜವಾಗಿತ್ತು. ಆದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪರಿಪೂರ್ಣವಾಗಿ ಸಹನೆ ದೋರಿದರು ಮತ್ತು ದೇವೇಚ್ಛೆಗೆ ತಲೆಬಾಗಿದರು.

ಹಝ್ರತ್ ಸಅದರ ಜನಾಝ ಕೊಂಡೊಯ್ಯಲು ಸಿದ್ಧವಾದಾಗ ಅವರ ವೃದ್ಧೆಯಾದ ಮಾತೆ ಪ್ರೀತಿ ಮತ್ತು ದುಃಖಾಧಿಕ್ಯದಿಂದ ಉಚ್ಛಧ್ವನಿಯಲ್ಲಿ ಗೋಳಾಡಿದರು. ಅವರು ಆ ಕಾಲದ ಆಚಾರದ ಪ್ರಕಾರ ಹಝ್ರತ್ ಸಅದರ ಸದ್ಗುಣಗಳನ್ನು ವಿವರಿಸುತ್ತಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಮೃತರ ಬಗ್ಗೆ ಗೋಳಾಡುವವರು ಬಹಳ ಸುಳ್ಳು ಹೇಳುತ್ತಾ ಗೋಳಿಡುತ್ತಾರೆ. ಆದರೆ ಸಅದರ ಮಾತೆ ಗೋಳಾಡುವಾಗ ಹೇಳಿದುದೆಲ್ಲವೂ ಸತ್ಯವೇ ಆಗಿದೆ. ನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನಮಾಝೆ ಜನಾಝ ನಿರ್ವಹಿಸಿದರು. ದಫನ್ ಮಾಡುವಲ್ಲಿಗೆ ಸ್ವತಃ ಹೋದರು. ದಫನ್ ಕಾರ್ಯ ಪೂರ್ಣಗೊಂಡ ನಂತರ ಮೃತರಿಗೋಸ್ಕರ ಪ್ರಾರ್ಥಿಸಿದ ನಂತರ ಅಲ್ಲಿಂದ ಹೋದರು. ಪ್ರಾಯಶಃ ಅದೇ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಸಅದ್ ಮೃತರಾದಾಗ ಪರಮ ದಯಾವಂತನ ಅರ್ಶ್ ಅಲುಗಾಡಲು ತೊಡಗಿದೆ. ಎಂದರೆ ಪರಲೋಕದಲ್ಲಿ ಅಲ್ಲಾಹನ ಕಾರುಣ್ಯ ಸಂತೋಷ ಭರಿತವಾಗಿ ಸಅದರ ಆತ್ಮವನ್ನು ಸ್ವಾಗತಿಸಿದೆ.

ಹಝ್ರತ್ ಸಅದ್ ದೃಢಕಾಯರಾದ ವ್ಯಕ್ತಿಯಾಗಿದ್ದರು. ಅವರ ಜನಾಝ ಎತ್ತಿಕೊಂಡು ಹೋಗುವಾಗ ಕಪಟ ವಿಶ್ವಾಸಿಗಳು ಹೇಳಿದರು: ಯಾರ ಜನಾಝವನ್ನು ಸಹ ಇಷ್ಟು

ಹಗುರವಾಗಿ ನಾವು ಕಂಡಿಲ್ಲ. ಇದಕ್ಕೆ ಕಾರಣ ಬನೂ ಖುರೈಝುರ ಬಗ್ಗೆ ಸಅದ್ ನೀಡಿದ ತೀರ್ಪು ಎಂದು. ಅವರು ಹಝ್ರತ್ ಸಅದ್ ಬಗ್ಗೆ ತಪ್ಪುಗ್ರಹಿಕೆ ಉಂಟಾಗಲಿ ಎಂದು ಉದ್ದೇಶಿಸಿದ್ದರು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅದರ ಬಗ್ಗೆ ತಿಳಿಸಿದಾಗ ಅವರು ಹೇಳಿದರು: ನನ್ನ ಜೀವ ಯಾರ ಸ್ವಾಧೀನದಲ್ಲಿದೆಯೋ ಅವನ ಆಣೆ ಹಾಕಿ ಹೇಳುತ್ತೇನೆ, ಸಅದರ ಜನಾಝ ನಿಮಗೆ ಹಗುರವಾಗಿ ಭಾಸವಾಗಲು ಕಾರಣ ಆ ಜನಾಝವನ್ನು ಮಲಾಯಿಕ ಎತ್ತಿಕೊಂಡಿದ್ದರು. ಇನ್ನೊಂದು ವರದಿ ಪ್ರಕಾರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಸಅದ್ ಬಿನ್ ಮುಆದ್‌ರ ಜನಾಝದ ಸಂದರ್ಭದಲ್ಲಿ ಎಪ್ಪತ್ತು ಸಾವಿರ ದೇವದೂತರು ಉಪಸ್ಥಿತರಿದ್ದರು. ಅದಕ್ಕಿಂತ ಮೊದಲು ಎಂದೂ ಇಷ್ಟು ದೇವದೂತರು ಇಳಿದು ಬರಲಿಲ್ಲ.

ಹಝ್ರತ್ ಅಬೂ ಸಈದ್ ಖುದ್‌ರೀ ಹೇಳುತ್ತಾರೆ: ಜನ್ನತುಲ್ ಬಖೀಅ್ ಖಬರಸ್ಥಾನದಲ್ಲಿ ಹಝ್ರತ್ ಸಅದ್ ಬಿನ್ ಮುಆದ್‌ರಿಗೋಸ್ಕರ ಗೋರಿ ತೋಡಿದವರಲ್ಲಿ ನಾನು ಸಹ ಸೇರಿದ್ದೆ. ನಾವು ಮಣ್ಣಿನ ಯಾವುದಾದರೂ ಭಾಗ ಅಗೆಯುವಾಗ ಕಸ್ತೂರಿಯ ಪರಿಮಳ ಬರುತ್ತಿತ್ತು. ಹಝ್ರತ್ ಸಅದ್ ಶಹೀದರಾಗುವಾಗ ಅವರ ಪ್ರಾಯ 37 ಆಗಿತ್ತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಅದರ ದಫನ್ ಕ್ರಿಯೆಯ ನಂತರ ಮರಳುವಾಗ ಅವರ ಕಣ್ಣೀರು ಗಡ್ಡದ ಮೇಲೆ ಹರಿಯುತ್ತಿತ್ತು.

ಹಝ್ರತ್ ಸಅದ್ ಹೀಗೆ ಹೇಳಿದುದಾಗಿ ವರದಿಯಾಗಿದೆ, ನಾನು ಬಹಳ ಬಲಹೀನನಾಗಿದ್ದೇನೆ. ಆದರೆ ಮೂರು ವಿಷಯಗಳಿಗೆ ಸಂಬಂಧಿಸಿ ಬಹಳ ದೃಢವಾಗಿದ್ದೇನೆ. ಒಂದನೆಯದು, ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಆಲಿಸಿದುದನ್ನೆಲ್ಲಾ ಸತ್ಯವೆಂದು ನಂಬಿದೆನು. ಎರಡನೆಯದು, ನಾನು ನಮಾಝ್ ಮಾಡುವಾಗ ನಮಾಝ್ ಪೂರ್ಣಗೊಳಿಸುವ ತನಕ ಬೇರೆ ಯೋಚನೆಗಳು ಬರದಂತೆ ನೋಡಿಕೊಂಡೆನು. ಮೂರನೆಯದು, ಯಾವುದಾದರೂ ಜನಾಝವನ್ನು ಕಂಡಾಗ ನಾನು ನನ್ನನ್ನು ಮೃತರ ಸ್ಥಾನದಲ್ಲಿರಿಸಿ ಯೋಚಿಸುತ್ತಿದ್ದೆ, ಮೃತನಾದವನು ಏನು ಹೇಳುವನು ಮತ್ತು ಮೃತನಿಂದ ಏನನ್ನು ವಿಚಾರಿಸಲಾಗುವುದು ಎಂದು.

ಹಝ್ರತ್ ಆಯಿಶ[ರ] ಹೇಳುತ್ತಾರೆ: ಅನ್‌ಸಾರ್‌ಗಳ ಪೈಕಿ ಮೂವರು ವ್ಯಕ್ತಿಗಳು ಹೇಗಿದ್ದರೆಂದರೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನಂತರ ಯಾರಿಗೂ ಈ ಮೂವರಿಗಿಂತ ಶ್ರೇಷ್ಠತೆ ಇರುವುದಾಗಿ ಗಣಿಸಲ್ಪಡುತ್ತಿರಲಿಲ್ಲ. ಆ ಮೂವರು ಹಝ್ರತ್ ಸಅದ್ ಬಿನ್ ಮುಆದ್, ಹಝ್ರತ್ ಉಸೈದ್ ಬಿನ್ ಹಝೀರ್ ಮತ್ತು ಹಝ್ರತ್ ಉಬಾದ ಬಿನ್ ಬಶರ್.

(ಹುಝೂರ್ ಹೇಳಿದರು:) ನಾನು ವಿವರಿಸಲಿರುವ ಇನ್ನೊಬ್ಬ ಸಹಾಬಿಯ ಹೆಸರು ಹಝ್ರತ್ ಸಅದ್ ಬಿನ್ ಅಬೀ ವಖಾಸ್[ರ]. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವರ್ಗ ದೊರೆಯುವುದಾಗಿ ಶುಭವಾರ್ತೆ ನೀಡಿದ ಹತ್ತು ಸಹಾಬರಲ್ಲಿ ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಒಬ್ಬರಾಗಿದ್ದರು. ಈ ಹತ್ತು ಜನರಲ್ಲಿ ಸಅದ್ ಬಿನ್ ಅಬೀ ವಖಾಸ್ ಎಲ್ಲರಿಗಿಂತ ಕೊನೆಯವರಾಗಿ ಮೃತರಾದರು. ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಮುಸ್ಲಿಮರಾದ ಘಟನೆ ಬಗ್ಗೆ ಅವರ ಪುತ್ರಿ ಹೀಗೆ ಹೇಳುತ್ತಾರೆ: ಹಝ್ರತ್ ಸಅದ್ ಹೇಳಿದರು, ನಾನು ಸ್ವಪ್ನದಲ್ಲಿ ಅಂಧಕಾರದಲ್ಲಿರುವುದಾಗಿ ಕಂಡೆನು. ನನಗೆ ಏನೂ ಕಾಣಿಸುತ್ತಿರಲಿಲ್ಲ. ಅಚಾನಕವಾಗಿ ನಾನು ಕಂಡೆನು, ಚಂದ್ರೋದಯವಾಗುತ್ತಿದೆ. ನಾನು ಅದರ ಕಡೆಗೆ ನಡೆದೆ. ನಾನು ನೋಡಿದೆ, ನನಗಿಂತ ಮೊದಲು ಹಝ್ರತ್ ಝೈದ್ ಬಿನ್ ಹಾರಿಸ, ಹಝ್ರತ್ ಅಲಿ ಮತ್ತು ಹಝ್ರತ್ ಅಬೂಬಕರ್ ಚಂದ್ರನ ಕಡೆಗೆ ಸಾಗುತ್ತಿದ್ದಾರೆ. ನಾನು ಅವರೊಂದಿಗೆ ವಿಚಾರಿಸಿದೆ ನೀವು ಯಾವಾಗ ತಲುಪಿದಿರಿ ಎಂದು. ಅವರು ಉತ್ತರ ನೀಡಿದರು, ನಾವು ಈಗ ತಾನೆ ತಲುಪಿದೆವು. ಹಝ್ರತ್ ಸಅದ್ ಹೇಳುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಹಸ್ಯವಾಗಿ ಇಸ್ಲಾಮಿನ ಕಡೆಗೆ ಆಮಂತ್ರಿಸುತ್ತಿರುವುದಾಗಿ ನನಗೆ ಸಮಾಚಾರ ಲಭಿಸಿತ್ತು. ನಾನು ಶುಅಬ್ ಅಜ್‌ಯಾದ್‌ಗೆ ಹೋಗಿ ಅವರನ್ನು ಭೇಟಿಯಾಗಿ ಮುಸ್ಲಿಮನಾದೆನು.

ಇಸ್ಲಾಮ್ ಧರ್ಮಕ್ಕೆ ಆರಂಭದಲ್ಲಿ ಪ್ರವೇಶಿಸಿದವರಲ್ಲಿ ಹಝ್ರತ್ ಅಬೂಬಕರ್‌ರವರ ತಬ್ಲೀಗಿನಿಂದ ಮುಸ್ಲಿಮರಾದ ಐವರು ಮಹತ್ವಪೂರ್ಣರೂ ಉನ್ನತ ಪದವಿ ಗಳಿಸಿದವರಲ್ಲಿ ಸೇರಿದವರೂ ಆಗಿದ್ದರು. ಅವರಲ್ಲಿ ಮೂರನೆಯವರು ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಆಗಿದ್ದಾರೆ. ಹಝ್ರತ್ ಉಮರರ[ರ] ಕಾಲದಲ್ಲಿ ಇರಾಖ್ ದೇಶವನ್ನು ಅವರು ಜಯಿಸಿದ್ದರು. ಅವರು ಅಮೀರ್ ಮುಆವಿಯರ ಕಾಲದಲ್ಲಿ ನಿಧನ ಹೊಂದಿದರು.

ಹಝ್ರತ್ ಅಬೂ ಹುರೈರ ವರದಿ ಮಾಡುತ್ತಾರೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿರಾ ಪರ್ವತದ ಮೇಲಿದ್ದಾಗ ಪರ್ವತ ಕಂಪಿಸಲು ತೊಡಗಿತು. ಆಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ಓ ಹಿರಾ, ಕಂಪನವನ್ನು ನಿಲ್ಲಿಸು. ಏಕೆಂದರೆ ನಿನ್ನ ಮೇಲೆ ನಬಿ, ಸಿದ್ದೀಖ್ ಮತ್ತು ಶಹೀದರ ಹೊರತು ಬೇರೆ ಯಾರೂ ನಿಂತಿಲ್ಲ. ಆಗ ಆ ಪರ್ವತದ ಮೇಲೆ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಹಝ್ರತ್ ಅಬೂಬಕರ್, ಹಝ್ರತ್ ಉಮರ್, ಹಝ್ರತ್ ಉಸ್ಮಾನ್, ಹಝ್ರತ್ ಅಲಿ, ಹಝ್ರತ್ ತಲ್‌ಹ, ಹಝ್ರತ್ ಝುಬೈರ್, ಮತ್ತು ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಇದ್ದರು.

ಯುದ್ಧಗಳ ಸಂದರ್ಭಗಳಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸಂರಕ್ಷಣೆಗೆ ಮತ್ತು ಭದ್ರತೆಯ ಹೊಣೆಗಾರಿಕೆಯನ್ನು ನೀಡಲಾದವರಲ್ಲಿ ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಒಬ್ಬರಾಗಿದ್ದರು. ಒಂದು ಹದೀಸಿನಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಪ್ರಾರ್ಥಿಸಿದ್ದರು: ಓ ಅಲ್ಲಾಹ್, ಸಅದ್ ನಿನ್ನೊಂದಿಗೆ ಪ್ರಾರ್ಥಿಸುವಾಗ ಅವರ ಪ್ರಾರ್ಥನೆ ಸ್ವೀಕರಿಸು. ಒಂದು ವರದಿಯಲ್ಲಿ ಹೀಗೆ ಹೇಳಲಾಗಿದೆ: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಸಅದ್ ಬಿನ್ ಅಬೀ ವಖಾಸ್ ಬಗ್ಗೆ ಹೀಗೆ ಪ್ರಾರ್ಥಿಸಿದರು: ಸಅದರ ಬಾಣ ಗುರಿಗೆ ಸರಿಯಾಗಿ ತಲುಪಲಿ ಮತ್ತು ಅವರ ಪ್ರಾರ್ಥನೆ ಅಂಗೀಕರಿಸಲ್ಪಡಲಿ. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಈ ದುಆದ ಕಾರಣದಿಂದ ಹಝ್ರತ್ ಸಅದರ

ಪ್ರಾರ್ಥನೆ ಅಂಗೀಕರಿಸಲ್ಪಡುತ್ತದೆ ಎಂದು ಪ್ರಸಿದ್ಧವಾಗಿತ್ತು. ಅವರು ಪ್ರಾರ್ಥನೆಗಳು ಅಂಗೀಕರಿಸಲ್ಪಡುವವರಲ್ಲಿ ಒಬ್ಬರಾಗಿದ್ದರು.

ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಿಜ್‌ರತ್ ಮಾಡಿದ ಆರಂಭದಲ್ಲಿ ಒಮ್ಮೆ ರಾತ್ರಿ ಸಅದ್ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪಹರೆ ನೀಡಿದ್ದರು. ಅಂತಹ ಒಂದು ಘಟನೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ವಿವರಿಸುತ್ತಾರೆ: ಹಝ್ರತ್ ಆಯಿಶ(ರ) ಹೇಳುತ್ತಾರೆ: ಖಂದಕ್ ಯುದ್ಧದ ಸಂದರ್ಭದಲ್ಲಿ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ರಾತ್ರಿ ಹೊತ್ತು ಸಹಾಬರೊಂದಿಗೆ ಪಹರೆ ನೀಡುತ್ತಿದ್ದರು. ರಾತ್ರಿ ಹೊತ್ತು ಚಳಿಯ ಕಾರಣದಿಂದ ಆಯಾಸಗೊಂಡಾಗ ಮನೆಗೆ ಬಂದು ಸ್ವಲ್ಪ ಹೊತ್ತು ನನ್ನೊಂದಿಗೆ ಹೊದಿಕೆಯೊಳಗೆ ಮಲಗುವಾಗ ಅವರ ಶರೀರದ ತಾಪ ವರ್ಧಿಸುತ್ತಿತ್ತು. ಆಗ ಪುನಃ ಅವರು ಹೊರಗೆ ಹೋಗಿ ಖಂದಕದಲ್ಲಿ ಬಿರುಕುಂಟಾದ ಸ್ಥಳವನ್ನು ಸಂರಕ್ಷಿಸಲು ಹೋಗುತ್ತಿದ್ದರು. ಈ ರೀತಿ ನಿರಂತರವಾಗಿ ರಾತ್ರಿ ಹೊತ್ತು ನಿದ್ರಿಸದೆ ಕಾವಲು ಕಾಯುತ್ತಾ ಇದ್ದುದರಿಂದ ಒಂದು ದಿನ ಅವರಿಗೆ ಬಹಳ ಆಯಾಸವಾಯಿತು. ಅವರು ರಾತ್ರಿ ಹೊತ್ತು ಹೇಳಿದರು: ಯಾರಾದರೊಬ್ಬ ನಿಷ್ಠಾವಂತ ಮುಸ್ಲಿಮನು ಬಂದಿದ್ದರೆ ನಾನು ಸುಖವಾಗಿ ನಿದ್ರಿಸುತ್ತಿದ್ದೆ. ಆಗ ಹೊರಗಿನಿಂದ ಸಅದ್ ಬಿನ್ ಅಬೀ ವಖಾಸ್‌ರ ಧ್ವನಿ ಕೇಳಿಸಿತು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ವಿಚಾರಿಸಿದರು: ಏಕೆ ಬಂದಿರಿ. ಆಗ ಸಅದ್ ಹೇಳಿದರು: ನಾನು ತಮಗೆ ಪಹರೆ ನೀಡಲು ಬಂದಿರುವೆನು. ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದರು: ನನಗೆ ಪಹರೆ ಒದಗಿಸುವ ಆವಶ್ಯಕತೆ ಇಲ್ಲ. ನೀವು ಖಂದಕದ ಅಂಚು ಬಿರುಕು ಬಿಟ್ಟಲ್ಲಿಗೆ ಹೋಗಿ ಪಹರೆ ನೀಡಿರಿ. ಆ ಮೂಲಕ ಮುಸ್ಲಿಮರು ಸುರಕ್ಷಿತರಾಗಲಿ. ಆಗ ಹಝ್ರತ್ ಸಅದ್ ಅಲ್ಲಿಗೆ ಪಹರೆ ನೀಡಲು ಹೋದರು. ಅನಂತರ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವಲ್ಪ ಹೊತ್ತು ನಿದ್ರಿಸಿದರು.

ಹಝ್ರತ್ ಸಅದ್ ಬಿನ್ ಅಬೀ ವಖಾಸ್‌ರ ಬಗ್ಗೆ ವಿವರಿಸಲು ಉಳಿದಿರುವುದನ್ನು ಇನ್‌ಶಾಅಲ್ಲಾಹ್ ಮುಂದೆ ವಿವರಿಸುವೆನು.

(ಖುತ್‌ಬದ ಕೊನೆಗೆ ಹುಝೂರ್, ಮುಕರ್‍ರಮ್ ಮಾಸ್ಟರ್ ಅಬ್ದುಸ್ಸಮೀಅ್ ಖಾನ್ ಸಾಹಿಬ್ ಮತ್ತು ಮುಕರ್‍ರಮ್ ಸಯ್ಯಿದ್ ಮುಜೀಬುಲ್ಲಾ ಸಾದಿಖ್ ಸಾಹಿಬರ ಸದ್ಗುಣಗಳನ್ನು ವಿವರಿಸಿ ಈ ಮೃತರ ಜನಾಝ ನಮಾಝ್‌ನೊಂದಿಗೆ ಮುಕರ್‍ರಮ್ ರಾಣಾ ನಈಮುದ್ದೀನ್ ಸಾಹಿಬರ ಜನಾಝ ಗಾಯಿಬ್ ಸಹ ನಿರ್ವಹಿಸುವುದಾಗಿ ಹೇಳಿದರು.)

—————————*****—————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَآءِ ذِى الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 17-07-2020*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim |***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon